**ಕರ್ನಾಟಕ ಸರ್ಕಾರ**

**ವಿಶೇಷ ಜಿಲ್ಲಾಧಿಕಾರಿ, ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣ, ಕೃಷ್ಣಾ ಮೇಲ್ದಂಡೆಯೋಜನೆಯವರ ಕಾರ್ಯಾಲಯ, ಜಮಖಂಡಿ 587301**

---

ವಿಷಯ: ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ರೂಗಿ, ವಸಂತನಗರ(ಇಂಡಿ) ಗ್ರಾಮಗಳ ಕೆಲವು ಜಮೀನುಗಳನ್ನು ಇಂಡಿ ಏತ ನೀರಾವರಿ ಕಾಲುವೆ ಕಿ.ಮೀ.137.00 ದಿಂದ 142.00 ರ ಅಧಿಕ ಕ್ಷೇತ್ರ ನಿರ್ಮಾಣಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಹಾಗೂ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರ ಕಲಂ 23ರಡಿಯಲ್ಲಿ ರಚಿಸಿದ ಐತೀರ್ಪಿಗೆ ಮಂಜೂರಿ ನೀಡುವ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂ:ಕಂಇ:18:ಆರ್‌ಇಹೆಚ್–2514. ದಿನಾಂಕ:06–02–2014

2) ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಸೂಕ್ತ ಪರಿಹಾರದ ಹಕ್ಕು ಹಾಗೂ ಪುನರ್ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ) ನಿಯಮಗಳು 2015ರ 2(ಸಿ) ಹಾಗೂ ಕಲಂ 30(8)

3) ಸರ್ಕಾರದ ಆದೇಶ ಸಂ:ಜಸಂಇ/43/ಎನ್‌ಎಂ.ಎಸ್./2017/ಬೆಂಗಳೂರು ದಿ:04–11–2017.

4) ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ:ಇಂಡಿ ಇವರ ಪತ್ರ ಸಂ:ಎಲ್.ಎ.ಕ್ಯೂ/ಎಸ್.ಆರ್–18/15–16/ ದಿನಾಂಕ:09–08–2018.

***

**ಪ್ರಸ್ತಾವನೆ:**

ಉಲ್ಲೇಖ(4) ದಡಿ ವಿಶೇಷ ಭೂಸ್ವಾಧೀನಾಧಿಕಾರಿ, ಕೃಮೇಯೋ: ಇಂಡಿ ಇವರು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ರೂಗಿ, ವಸಂತನಗರ(ಇಂಡಿ) ಗ್ರಾಮಗಳ ಕೆಲವು ಜಮೀನುಗಳನ್ನು ಇಂಡಿ ಏತ ನೀರಾವರಿ ಕಾಲುವೆ ಕಿ.ಮೀ.137.00 ದಿಂದ 142.00 ರ ಅಧಿಕ ಕ್ಷೇತ್ರ ನಿರ್ಮಾಣಕ್ಕಾಗಿ ಭೂಸ್ವಾಧೀನ ಬಗ್ಗೆ ಐತೀರ್ಪು ರಚಿಸಿ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ.

ಉಲ್ಲೇಖ (1)ರ ಆದೇಶದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಮೂಹ ವ್ಯವಸ್ಥಾಪಕರು, ಕೃಮೇಯೋ, ಜಮಖಂಡಿರವರನ್ನು ಅಧಿಕೃತ ಪ್ರಾಧಿಕಾರ ಅಂತಾ ತಿಳಿಸಿದ ಮೇರೆಗೆ ಹಾಗೂ ಉಲ್ಲೇಖ (2)ರಲ್ಲಿ ಭೂಸ್ವಾಧೀನ ಪ್ರಕರಣಗಳಲ್ಲಿ ಪುನರ್ವಸತಿ ಮತ್ತು ಪುನರವ್ಯವಸ್ಥೆ ಮೊತ್ತವು ಸೇರಿದಂತೆ ರೂ.5.00 ಕೋಟಿ ಮಿತಿಯವರೆಗಿನ ಎಲ್ಲ ಐತೀರ್ಪು ಅನುಮೋದಿಸಲು ವಿಶೇಷ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಪ್ರಸ್ತುತ ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಕಲಂ 11(1)ರಡಿ ಪ್ರಾರಂಭಿಕ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ:23–01–2015 ರಂದು ಪ್ರಕಟವಾಗಿದ್ದು, ಬಿಜಾಪುರ ವಾರ್ತೆ ವಿಜಯಪುರ ಕನ್ನಡ ದಿನಪತ್ರಿಕೆಗಳಲ್ಲಿ ದಿನಾಂಕ:15–02–2015 ರಂದು ಹಾಗೂ ಗ್ರಾಮಚಾವಡಿ, ರೂಗಿ ಹಾಗೂ ವಸಂತನಗರ(ಇಂಡಿ) ಕಛೇರಿಯಲ್ಲಿ ದಿನಾಂಕ:10–02–2015 ರಂದು ಪ್ರಚುರಪಡಿಸಿದೆ.

ಪ್ರಸ್ತುತ ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಕಲಂ 19(1) (2) ರಡಿ ಅಂತಿಮ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ:18–10–2016ರಂದು ಪ್ರಕಟವಾಗಿದ್ದು, ಉದಯ ಮತ್ತು ಬಿಜಾಪುರ ವಾರ್ತಾ ವಿಜಯಪುರ ಕನ್ನಡ ದಿನಪತ್ರಿಕೆಗಳಲ್ಲಿ ದಿನಾಂಕ:29–12–2016 ಮತ್ತು 12–12–2016 ರಂದು ಪ್ರಚುರಪಡಿಸಿದೆ ಹಾಗೂ ಗ್ರಾಮ ಚಾವಡಿಯಲ್ಲಿ ದಿನಾಂಕ:26–08–2017 ರಂದು ಪ್ರಚುರಪಡಿಸಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತಪರಿಹಾರದ ಹಕ್ಕು ಹಾಗೂ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರ ಕಲಂ 26 ರನ್ವಯ ಸದರೀ ಕಲಂ 11(1) ರ ಅಧಿಸೂಚನೆಯ ದಿನಾಂಕದ ಪೂರ್ವ ಮೂರು ವರ್ಷಗಳಲ್ಲಿ ರೂಗಿ ಗ್ರಾಮದಲ್ಲಿ ಮಾರಾಟವಾದ ಜಮೀನುಗಳ ಕುರಿತು ಉಪ ನೋಂದಣಾಧಿಕಾರಿ ಇಂಡಿರವರಿಂದ ಪಡೆದ ಮಾರಾಟವಾದ ಅಂಕಿ ಅಂಶದಂತೆ ಖುಷ್ಕಿ ಜಮೀನಿನ ಬೆಲೆ ಪ್ರತಿ ಎಕರೆಗೆ ರೂ.50,198–00 ಇದ್ದು ಹಾಗೂ ನೀರಾವರಿ ಜಮೀನು ಮಾರಾಟವಾಗಿರುವುದಿಲ್ಲ ಅಂತಾ ತಿಳಿಸಿದ್ದು ಇದೆ. ಕಾರಣ ಮಾರ್ಗಸೂಚಿ ಬೆಲೆ ನೀರಾವರಿ ಜಮೀನಿಗೆ ರೂ.85,000–00 ನಿಗದಿಪಡಿಸಿದ್ದು ಇದೆ. ಮುದ್ರಾಂಕ ಕಾಯ್ದೆ 1957 ರನ್ವಯ ನೋಂದಣಿ ಇಲಾಖೆಯ ಮಾರ್ಗಸೂಚಿ ಬೆಲೆ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ.44,000–00 ಇದ್ದು, ಹಾಗೂ ನೀರಾವರಿ ಜಮೀನಿಗೆ ಪ್ರತಿ ಎಕರೆಗೆ ರೂ. 85,000–00

..2..

ಇದ್ದು ಕಾರಣ ಖುಷ್ಕಿ ಜಮೀನು ಮಾರ್ಗಸೂಚಿ ಬೆಲೆಗಿಂತ ಮಾರುಕಟ್ಟೆ ಬೆಲೆ ಹೆಚ್ಚಾಗುವುದರಿಂದ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ.50,198-00 ರಂತೆ ನಿಗದಿಪಡಿಸಿ, ಹಾಗೂ ನೀರಾವರಿ ಜಮೀನಿಗೆ ಪ್ರತಿ ಎಕರೆಗೆ ರೂ.85,000-00 ರಂತೆ ನಿಗದಿಪಡಿಸಿದ್ದು ಇರುತ್ತದೆ. ಹಾಗೂ ವಸಂತನಗರ(ಇಂಡಿ) ಗ್ರಾಮದಲ್ಲಿ ಮಾರಾಟವಾದ ಜಮೀನುಗಳ ಕುರಿತು ಉಪ ನೋಂದಣಾಧಿಕಾರಿ ಇಂಡಿರವರಿಂದ ಪಡೆದ ಮಾರಾಟವಾದ ಅಂಕಿ ಅಂಶದಂತೆ ಖುಷ್ಕಿ ಜಮೀನಿನ ಬೆಲೆ ಪ್ರತಿ ಎಕರೆಗೆ ರೂ.50,236-00 ಇದ್ದು ಹಾಗೂ ನೀರಾವರಿ ಜಮೀನು ಮಾರಾಟವಾಗಿರುವುದಿಲ್ಲ ಅಂತಾ ತಿಳಿಸಿದ್ದು ಇದೆ. ಮುದ್ರಾಂಕ ಕಾಯ್ದೆ 1957 ರನ್ವಯ ನೋಂದಣಿ ಇಲಾಖೆಯ ಮಾರ್ಗಸೂಚಿ ಬೆಲೆ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ.53,000-00 ಇದ್ದು, ಹಾಗೂ ನೀರಾವರಿ ಜಮೀನಿಗೆ ಪ್ರತಿ ಕೆರೆಗೆ ರೂ.1,00,000-00 ಇದ್ದು ಕಾರಣ ಖುಷ್ಕಿ ಜಮೀನು ಮಾರುಕಟ್ಟೆ ಬೆಲೆಗಿಂತ ಮಾರ್ಗಸೂಚಿ ಬೆಲೆ ಹೆಚ್ಚಾಗುವುದರಿಂದ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ.53,000-00 ರಂತೆ ನಿಗದಿಪಡಿಸಿ, ವಿಶೇಷ ಭೂಸ್ವಾಧೀನಾಧಿಕಾರಿ, ಕೃಮೇಯೋ:ಇಂಡಿರವರು ಗಣನೆಗೆ ತೆಗೆದುಕೊಂಡು ಪರಿಹಾರ ಧನವನ್ನು ಕಲಂ 26 ರಡಿ ಬೆಲೆ ನಿಗದಿಪಡಿಸಿ ಒಪ್ಪಿ ಐತಿರ್ಪು ರಚಿಸಿದ್ದಾರೆ.

ಹಾಲಿ ಪ್ರಸ್ತಾವನೆಯಲ್ಲಿ ಒಟ್ಟು 15 ಸರ್ವೆ ನಂಬರುಗಳ ಕ್ಷೇತ್ರ 15 ಎಕರೆ 39 ಗುಂಟೆ ಜಮೀನು ಒಳಗೊಂಡಿದ್ದು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಹಾಗೂ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರ ಕಲಂ 30(3) ಪ್ರಕಾರ ಶೇ.12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆಯನ್ನು ಕಲಂ 11(1) ರ ಅಂತಿಮ ಅಧಿಸೂಚನೆ ಪ್ರಕಟಣೆ ದಿನಾಂಕ:30-08-2015 ರಿಂದ ಐತೀರ್ಪು ಘೋಷಣೆ ದಿನಾಂಕದವರೆಗೆ ಪಾವತಿಸಬಹುದಾಗಿದೆ ಹಾಗೂ ಕಲಂ 30 (1)ರಂತೆ ಶೇ. 100 ರಂತೆ ನಷ್ಟ ಭರ್ತಿ ಪರಿಹಾರ ಧನವನ್ನು ಭೂಮಾಲೀಕರಿಗೆ ಪಾವತಿಸಬಹುದಾಗಿದೆ.

ಪ್ರಸ್ತಾವನೆಯಲ್ಲಿರುವ ಜಮೀನುಗಳ ಕಬ್ಜಾ ಪಡೆದಿಲ್ಲವಾದ್ದರಿಂದ ಭೂಸ್ವಾಧೀನಕಾಯ್ದೆ 2013ರ ಕಲಂ 80 ರನ್ವಯ ಬಡ್ಡಿ ಹಣಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಉಲ್ಲೇಖ (3)ರ ಆದೇಶದಲ್ಲಿ ಸನ್ 2017-18ನೇ ಸಾಲಿನಲ್ಲಿ ರೂ.500 ಕೋಟಿ ಬಿಡುಗಡೆಗೊಳಿಸಿದ ಮೇರೆಗೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

:: ಆ ದೇ ಶ ::

ಕ್ರ.ಸಂ:ವಿಜಿಜ:ಭೂಸ್ವಾ-2:ಸಿ.ಆರ್-06/2018-19 ದಿನಾಂಕ: 18/08/2018.

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಪರಿಶಿಲಿಸಲಾಗಿ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ರೂಗಿ, ವಸಂತನಗರ (ಇಂಡಿ) ಗ್ರಾಮಗಳ ಕೆಲವು ಜಮೀನುಗಳನ್ನು ಇಂಡಿ ಏತ ನೀರಾವರಿ ಕಾಲುವೆ ಕಿ.ಮೀ.137.00 ದಿಂದ 142.00 ರ ಅಧಿಕ ಕ್ಷೇತ್ರ ನಿರ್ಮಾಣಕ್ಕಾಗಿ ಜಮಿನುಗಳನ್ನು ಸ್ವಾಧಿನಪಡಿಸಿಕೊಳ್ಳಲು ಉದ್ದೇಶಿಸಿದ್ದು, ರೂಗಿ ಗ್ರಾಮದ ಜಮೀನು ಮಾರಾಟದ ಸರಾಸರಿ ಬೆಲೆಯ ಪ್ರಕಾರ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ.50,198-00 ರಂತೆ ಹಾಗೂ ನೀರಾವರಿ ಜಮೀನು ಪ್ರತಿ ಎಕರೆಗೆ ಮಾರ್ಗಸೂಚಿ ದರ ರೂ.85,000-00 ರಂತೆ ಪರಿಹಾರ ಹಾಗೂ ವಸಂತನಗರ(ಇಂಡಿ) ಗ್ರಾಮದ ಖುಷ್ಕಿ ಜಮೀನಿಗೆ ಮಾರ್ಗಸೂಚಿ ಬೆಲೆ ಪ್ರತಿ ಎಕರೆಗೆ ರೂ.53,000-00 ರಂತೆ ಪರಿಹಾರ ನಿಗದಿಪಡಿಸಿದ್ದು, ಒಟ್ಟು 15 ಸರ್ವೆ ನಂಬರಿನ ಕ್ಷೇತ್ರ 15 ಎಕರೆ 39 ಗುಂಟೆ ಕ್ಷೇತ್ರಕ್ಕೆ ಒಟ್ಟು ಮೂಲ ಮಾರುಕಟ್ಟೆ ಬೆಲೆ ರೂ.11,23,296-00 ಗಳಿಗೆ ಹಾಗೂ ಗಿಡಗಳ ಪರಿಹಾರ ಧನಕ್ಕೆ ಭೂಸ್ವಾಧೀನ ಪ್ರಕಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಹಾಗೂ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರನ್ವಯ ಐತೀರ್ಪು ರಚಿಸಿದ್ದು, 12% ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ ಮತ್ತು 100% ರಷ್ಟು ನಷ್ಟ ಭರ್ತಿ ಹಣಕೊಡಲು ಹಾಗೂ ಕೊಳವೆ ಬಾವಿಗೆ ಐತೀರ್ಪಿನಲ್ಲಿ ಚರ್ಚಿಸಿ ನಿಗದಿಪಡಿಸಿದ ಪರಿಹಾರ ಧನವನ್ನು ನೀಡಲು ಆದೇಶಿಸಲಾಗಿದೆ.0020

ಐತೀರ್ಪಿಗೆ ಭೂಸ್ವಾಧೀನ ಕಾಯ್ದೆಯನ್ವಯ ಪ್ರದತ್ತವಾಗಿರುವ ಆಧಿಕಾರದ ಮೇರೆಗೆ ಹಾಗೂ ಐತೀರ್ಪಿನಲ್ಲಿ ನಮೂದಿತವಾಗಿರುವ ಸತ್ಯ ಸಂಗತಿಗಳು ಮತ್ತು ಕಾನೂನಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿರುವ ಇತರೆ ನಿಯಮಗಳ ಬಗ್ಗೆ ವಿಶೇಷ ಭೂಸ್ವಾಧೀನಾಧಿಕಾರಿ, ಕೃಮೇಯೋ:ಇಂಡಿ ಇವರ ವೈಯಕ್ತಿಕ ಜವಾಬ್ದಾರಿಯ ಮೇರೆಗೆ ಈ ಮೂಲಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

| | | | |
|---|---|---|---|
| 1 | ಗ್ರಾಮದ ಹೆಸರು | | ರೂಗಿ, ವಸಂತನಗರ(ಇಂಡಿ) |
| 2 | ತಾಲ್ಲೂಕ | | ಇಂಡಿ |
| 3 | ಭೂಸ್ವಾಧೀಪಡಿಸಿಕೊಳ್ಳುವ ಸ.ನಂ. | | 1)134 ಸಮೋ, 134/1ಹರ 2)138 ಸಮೋ, 138/1,ಹರ 3)149/ಸಮೋ, 149/1,2 ಹರ 4)ದಾರಿ 5)151 ಸಮೋ, 151/X-1, X-2 ಹರ 6)202/3 7)203 8)205/1ಸಮೋ,205/2:ಹರ 9)205/1ಸಮೊ, 205/2ಹರ 10)205/1, 205/3ಹರ 11)209ಸಮೊ, 209/1,2ಹರ 12)212 13)213 14)575/111/5 15)575/111/3ಸಮೋ, 575/3ಅ/1/1 |
| 4 | ಭೂಸ್ವಾಧೀನಕ್ಕೊಳಪಡುವ ಜಮೀನಿನ | ಕ್ಷೇತ್ರ | 15 ಎಕರೆ 39 ಗುಂಟೆ |
| 5 | ಭೂಸ್ವಾಧೀನಪಡಿಸಿಕೊಳ್ಳುವ ಜಮೀನಿನ ಮಾರುಕಟ್ಟೆ ಬೆಲೆ | ರೂ. | ರೂ.11,23,296-00 |